ಕೋಲಾರ ಡಿಸ್ಟ್ರಿಕ್ಟ್.

ಸ್ ೧೯೦೭ನೆ ಇಸವಿ ಮಾರ್ಚ್ ತಾರೀಖು 23ರಲ್ಲು ಕೋಲಾರದಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡ್ ವಿಷಯಂಗಿನ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಪಿ. ಶ್ರೀಕಂಠೇಶ್ವರ ಐಯ್ಯರವರು, ಬಿ. ಎ., ಬಿ. ಎಲ್., ಪ್ರೆಸಿಡೆಂಟರು.
2. ,, ಹಸ್ಸೇಅಲ್ಲಿ ಸಾಹೇಬರವರು, ವೈಸ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರವರು, ಕೋಲಾರ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರವರು.
4. ,, ಎ. ಆರ್. ಪೂನ್ನ ಸಾಮಿಪಿಳ್ಳೆಯವರು, ಡಿ॥ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
5. ,, ಕೆ. ಕೃಷ್ಣಯ್ಯಂಗಾರ್ಯವರು, ಎಗ್ಸಿಕ್ಯೂಟಿವ್ ಇಂಜನಿಯರ್.
6. ,, ಎಸ್. ಗೋಪಾಲರಾಯರವರು, ಸ್ಕೂಲ್ ಡಿ॥ ಇನ್ಸ್ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸ್ (ಡಿ)

1. ಮೆ॥ ಮುನಿನಾರಾಯಣ ಕೆಟ್ಟಿಯವರು, ಕೋಲಾರ.
2. ,, ರಾಮರಾಯರವರು, ಮಾಲೂರು.
3. ,, ದೊಂತಿ ಚಿಕ್ಕಸುಬ್ರಾಯಪ್ಪನವರು, ಶಿಡ್ಲಘಟ್ಟ.
4. ,, ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಜೈಯ್ಯನವರು, ಬವರಿಂಗಪೇಟೆ.
6. ,, ಕಾಷ್ಪ ಹೈದರಸಾಹೇಬರವರು, ಮುಳಬಾಗಲು.
7. ,, ಮಹಮದ್‌ಹಸ್ಸನ್‌ಸಾಹೇಬ್, ಶ್ರೀನಿವಾಸಪುರ.
8. ,, ಲಕ್ಷ್ಮಣರಾಯರವರು, ಗುಡಿಬಂಡೆ.
9. ,, ರಾಮಣ್ಣನವರು, ಗೋರಿಬಿದನೂರು.
10. ,, ಪಿ. ಕೀನಪ್ಪನವರು, ಬಾಗೇಪಲ್ಲಿ.

ಕ್ಲಾಸ್ (ಇ)

11. ಮೆ॥ ಬಸವೇಗೌಡರವರು, ಬವರಿಂಗಪೇಟೆ.
12. ,, ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಶ್ರೀನಿವಾಸಾಚಾರ್ಯರು, ಶಿಡ್ಲಘಟ್ಟ.
15. ,, ಗಾಡಿಗೆರೆ ಕೃಷ್ಣಾಚಾರ್ಯರು, ಗೋರಿಬಿದನೂರು.
16. ,, ವೆಂಕಟರಡ್ಡಿಯವರು, ಬಾಗೇಪಲ್ಲಿ.

ಗೈರ್ ಹಾಜರು.

ಎಕ್ಸ್ ಅಫಿಷಿಯೊ ಮೆಂಬರುಗಳು.

1. ಮೆ॥ ಜೆ. ಆರಾವಮುದೈಯ್ಯಂಗಾರ್ಯರು, ಬಿ. ಎ., ಬಿ. ಎಲ್., ಚಿಕ್ಕಬಳ್ಳಾಪುರ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರವರು.
2. ,, ನರಸಿಂಗರಾವ್ ಪೂರ್ಣಯ್ಯನವರು, ಅಸಿಸ್ಟೆಂಟ್ ಕಮಿಷನರು ಮಾಲೂರು ಡಿವೀಜ್.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಜು (ಡಿ)

1. ಮೆ॥ ನಾರಾಯಣಸಾಮಿಕೆಟ್ಟಿಯವರು, ಚಿಕ್ಕಬಳ್ಳಾಪುರ.

---

1. 1906ನೆ ಇಸವಿ ಡಿಸೆಂಬರ್ 21ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡ್ ವಿಷಯಂಗಿನ ಪ್ರೊಸೀಡಿಂಗ್ಸು ಓದಿ ನಿರ್ಧರಿಸಲ್ಪಟ್ಟಿತು.

2. ಕಂಟ್ರೋಲರ ಸಾಹೆ ಬರವರಿಂದ ಆಡಿಟ್ ಆಗಿ ಬಂದ 1906ನೆ ಜುಲೈ ಲಾಗಾಯಿತು ಅಕ್ಟೋಬರ್ ಅಖೈರ್ ವರಿಗಿನ ಜಮಾಖರ್ಚು ಲೆಕ್ಕಗಳು ಓದಿ ಪ್ಯಾಸು ಮಾಡಲ್ಪಟ್ಟಿತು.

3. ಲೋಕಲ್ ಫಂಡು ಪ್ರೊವಿಜಗು ಪೈಕಿ ಕೆಲವು ಭಾಗವನ್ನು 50 ವರಹಗಳಿಗೆ ಜಾಸ್ತಿಯಾಗಿರತಕ್ಕ ಗ್ರಾಮಗಳ ಸ್ಯಾನಿಟೇರ್ಷ್ ವಿಚಾರವಾದ ಕೆಲಸಗಳಿಗೆ ಕೊಡಬೇಕೆಂಬುವ ವಿಷಯದಲ್ಲಿ ದಸರಾ ರೆಸ್ಪಜೆಂಟೇಟಿವ್ ಅಸ್ಸೆಂಬ್ಲಿಯ 218ನೆ ನಂ. ಸಂಗತಿಯನ್ನು ಜೋರ್ಡಿನವರ ಫೈನಲ್ ಬ್ಯೆ ಕಳುಹಿಸಿರುತ್ತೆಂದು ಸೆಕ್ರಟೆರಿ ಸಾಹೇಬರವರ 4-1-07ನೆ ಮುಕ್ಕಾಂ 6401-8—L. F. 185-06ನೆ ನಂ. ಪತ್ರಿಕೆ ಓದಲಾಯಿತು.

ಸಾಲೀದಾನಾ ಈ ಕೆಲಸಗಳಿಗಾಗಿ ಈಗ ಬೋರ್ಡಿನವರು, ವದಗಿದಷ್ಟು ಹಣ ಕೊಡುತ್ತಾ ಇರುವದ್ದರಿಂದ ಇದನ್ನು ರಿಜಾರ್ಡು ಮಾಡಲ್ಪಟ್ಟಿತು.

4. ದಾರಿ ಖರ್ಚುಗಳು ಕೊಡುವ ವಿಷಯದಲ್ಲಿ ತಾಲ್ಲೂಕು ಬೋರ್ಡು ಮೆಂಬರುಗಳಿಗೂ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಿಗೂ ರೂಲ್ಸಿನಲ್ಲಿ ಏನೂ ವ್ಯತ್ಯಾಸವಿರುವದಿಲ್ಲ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ರೇಟು ವಿಷಯದಲ್ಲಿ ವ್ಯತ್ಯಾಸವಮಾಡಿರುತ್ತಾರೆ. ಈ ವಿಷಯ ಬೋರ್ಡಿನಲ್ಲಿ ಚರ್ಚೆಸಬೇಕೆಂದು ಗೌರ್ನಮೆಂಟಿನಿಂದ ತಲಪಿದ 6—3—07ನೆ ನಂಬರು ನಂ 7600-9—L. F. 173-06ನೆ ನಂಬರ್ ಪ್ರೊಸೀಡಿಂಗ್ಸು ಓದಲಾಯಿತು.

ಬೋರ್ಡಿನವರು ಗೌರ್ನಮೆಂಟಿನವರ ಅಭಿಪ್ರಾಯದಂತೆ ವ್ಯತ್ಯಾಸ ಮಾಡತಕ್ಕದ್ದು ಅನಾವಶ್ಯಕವೆಂದು ಒಪ್ಪಿಕೊಳ್ಳುತ್ತಾರೆ.

5. ಲೋಕಲ್ ಫಂಡು ಡಿಸ್ಪೆನ್ಸರಿಗಳಲ್ಲಿ ಪಿಂಗಸು ರೋಗಿಗಳಿಗೆ ಪ್ರತ್ಯೇಕ ಬಂದು ವೆಯಿಟಿಂಗು ರೂಂ ಅಂದರೆ ನಿಲ್ಲುವ ಸ್ಥಳ ಏರ್ಪಾಟು ಮಾಡುವ ವಿಷಯದಲ್ಲಿ ಎಲ್ಲಾ ಡಿಸ್ಟ್ರಿಕ್ಟು ಬೋರ್ಡುಗಳ ಅಭಿಪ್ರಾಯಗಳನ್ನು ರಿಕಾರ್ಡು ಮಾಡಿರುತ್ತೆಂಬದಾಗಿ ಗೌರ್ನಮೆಂಟಿನಿಂದ ತಲಪಿದ 18—3—07ನೆ ನಂಬರು ನಂ 8469-79—Md. 243-05—1ನೆ ನಂಬರ್ ಪ್ರೊಸೀಡಿಂಗ್ಸು ಓದಿ ರಿಜಾರ್ಡು ಮಾಡಲ್ಪಟ್ಟಿತು.

6. ಚಿಕ್ಕಬಳ್ಳಾಪುರದಲ್ಲಿ ಎರಡು ಇನ್‌ವೇಷೆಂಟು ವಾರ್ಡುಗಳು ಕಟ್ಟತಕ್ಕ ವಿಷಯದಲ್ಲಿ ಸೀನಿಯರ್ ಸರ್ಜನ್ ಸಾಹೇಬರವರಿಂದ ತಲಪಿದ 20—12—06ನೆ ನಂಬರು ನಂ 4029ನೆ ನಂಬರ್ ಡಾಕ್ಯೆಟ್ಟು ಓದಲಾಯಿತು.

ಈ ಚಿಕ್ಕಬಳ್ಳಾಪುರವು ಒಂದು ದೊಡ್ಡ ಸಬ್ ಡಿವಿಜನಿಗೆ ಮಧ್ಯ ಪ್ರದೇಶವಾದ್ದರಿಂದ ಇಲ್ಲಿ ಎರಡು ಇನ್‌ವೇಷೆಂಟು ವಾರ್ಡುಗಳು ಕಟ್ಟತಕ್ಕದ್ದು ಅತ್ಯವಶ್ಯಕವಾಗಿರುತ್ತೆ, ಮೂರರಲ್ಲಿ ಒಂದು ಭಾಗ ಮೊಬಲಗು ಇದಕ್ಕಾಗಿ ಡಿಸ್ಟ್ರಿಕ್ಟು ಫಂಡುನಿಂದ ಕೊಡಬೇಕಾಗಿರುವ 900 ರೂಪಾಯಿಗಳಿಗೆ ರಿವೈಜು ಎಸ್ಟಿಮೆಟ್ಟು ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

7. ಎಕ್ಸಿಕ್ಯೂಟಿವ್ ಇಂಜಿನಿಯರವರಿಂದ ತಲಪಿದ ಈ ಕೆಳಗೆ ನಮೂದಾಗುವ ಕಾಂಗಾರಿಗಳು ಬೋರ್ಡಿನಲ್ಲಿ ಮಂಜೂರ್ಮಾಡಲ್ಪಟ್ಟವು :—

			ರೂ.
1.	ಜಂಗಂಕೋಟೆ ಮ್ಯುನಸ್ಸಾಫರ್ ಬಂಗ್ಲೆ ರಿಪೇರಿ	...	580
2.	ನರಸಾಪುರ ಡಿಟೋ	...	218
3.	ವೇಮಗಲ್ ಡಿಟೋ	...	357
4.	ಕಿಡ್ಲಘಟ್ಟ ಡಿಟೋ	...	46
5.	ಮುಳಬಾಗಲು ಡಿಟೋ	...	362
6.	ಚಿಂತಾಮಣಿ ಡಿಟೋ	...	116
7.	ತಳಗವಾರ ಡಿಟೋ	...	74
8.	ಜೇಳೂರು ಡಿಟೋ	...	72
9.	ಮುಳಬಾಗಲ್ ರೈಲ್ವೆ ಫೀಡರ್ ರಿಪೇರಿ	...	443
10.	ಮಾಲೂರು-ಮಾಸ್ತಿ ರೋಡಿನಲ್ಲಿ ಟನಲ್ ರಿಪೇರಿ	...	142
11.	ತೊಂಬೇಭಾವಿ-ಮದ್ದಗಿರಿ ರಸ್ತೇಲಿ ರೋಡು ಡ್ಯಾಂ ಕಟ್ಟಲು	...	228
12.	ಬೂದಿಕೋಟೆ ರೈಲ್ವೆ ಫೀಡರಿಗೆ ಅಡ್ಡವಾಗಿ ಬಂದು ಕಾಜುವೆ ರಿಪೇರಿ	...	180
13.	ಎಲ್ಲಂಪಲ್ಲಿ-ಜೇಳೂರು ರಸ್ತೆ ರಿಪೇರಿ	...	91
		ಜುಮ್ಲಾ ...	2,909

8. ಎಕ್ಸಿಕ್ಯೂಟಿವ್ ಇಂಜನಿಯರವರಿಂದ ತಲಪಿದ ಈ ಕೆಳಗೆ ನಮೂದಾಗುವ ಅಂದಾಜುಗಳನ್ನು ಈಗ ಸದ್ಯಕ್ಕೆ ಅವಶ್ಯಕವಿಲ್ಲವೆಂದು ತೀರ್ಮಾನವಾಯಿತು :—

1.	ನರಸಾಪುರ ಬಂಗ್ಲೆ ಔಡಾವಣಿ	...	426
2.	ವೇಮಗಲ್ ಡಿಟೋ	...	502
3.	ರಾಯಲ್‌ಪಾಡು ಡಿಟೋ	...	1,332
4.	ಕಿಡ್ಲಘಟ್ಟ ಡಿಟೋ	...	237
5.	ಬೇತಮಂಗಲ ಡಿಟೋ	...	341
6.	ಮುಳಬಾಗಲ್-ಗೋಡಬಿದನೂರು ರಸ್ತೆ ರಿಪೇರಿ	...	499
7.	ಕೋಲಾರ-ಸೋಂಪುರು ರಸ್ತೆ 1ನೆ ಮೈಲಿಯಿಂದ 14ನೆ ಮೈಲಿ ವರಗೆ ರಿಪೇರಿ	...	468
8.	ಕೋಲಾರ-ವೆಂಕಟಗಿರಿ ಕೋಟೆ ರಸ್ತೆ ಸ್ಪೆಷಲ್ ರಿಪೇರಿ	...	1,332
9.	ಚಿಂತಾಮಣಿ-ಚಿನ್ನಸಂದ್ರ ರಸ್ತೆ ರಿಪೇರಿ	...	1,806
		ಜುಮ್ಲಾ ...	5,945

9. ನಂದಿ ಪೆಟ್ಟದಮೇಲೆ ಅಮೃತಸರೋವರದ ಮುಂಭಾಗದಲ್ಲಿರುವ ಮಂಟಪವನ್ನು ರಿಪೇರಿ ಮಾಡಲು 53 ರೂಪಾಯಿಗೆ ಬಂದು ಅಂದಾಜು ಮಂಜೂರ್ಮಾಡಿರುವದಾಗಿ ಪ್ರೆಸಿಡೆಂಟರವರ 19—2—07ನೆ ಮಾರ್ಕಿನ ಮೆಮೋ. ಓದಲಾಯಿತು.

ಪ್ರೆಸಿಡೆಂಟರವರ ನಡವಳಿಕೆಯನ್ನು ಒಪ್ಪಿಕೊಂಡು ಈ ಮೊಬಲಗು ಚಾಲ್ತಿ ಸಾಲ್ ಬಜೆಟ್ಟಿನಲ್ಲಿ A-IIನೆ ಹೆಡ್ಡಿನಲ್ಲಿ ರಿಜರ್ವ್ಡ್‌ಗೋಸ್ಕರ ದಾಖಲಾಗಿರುವ ಮೊಬಲಗು ಪೈಕಿ ಕೊಡತಕ್ಕದ್ದೆಂದು ತೀರ್ಮಾನ ಮಾಡಲ್ಪಟ್ಟಿತು.

10. 1904-05ನೆ ಸಾಲಿನಲ್ಲಿ ಗೋರಿಬಿದನೂರು ತಾಲ್ಲೂಕು ಬಂಡಾರ್ಲಹಳ್ಳಿಗೆ ಭಾವಿಗೋಸ್ಕರ ಮಂಜೂರ್ಮಾಡಿದ್ದ 300 ರೂಪಾಯಿ ಪೈಕಿ ಗೋರಿಬಿದನೂರು ಮುಸಾಫರಬಂಗ್ಲೆ ಕಾಂಪೌಂಡುನಲ್ಲಿ ಭಾವಿಗೋಸ್ಕರ 178 ರೂ. ಮಂಜೂರಾಗಬೇಕೆಂದು ಚಿಕ್ಕಬಳ್ಳಾಪುರ ಸಬ್ ಡಿವಿಜ಼ನ್ ಆಫಿಸರವರ 12—3—07ನೆ ಮಾರ್ಕ್ಕಿಂ 1023ನೆ ನಂಬರ್ ಯಾದಿ ಓದಲಾಯಿತು.

ಬಂಡಾರ್ಲಹಳ್ಳಿ ಭಾವಿಗೆ 1904—05ನೆ ಸಾಲಿನಲ್ಲಿ ಮಂಜೂರಾಗಿದ್ದ ಮೊಬಲಗು ಆ ಸಾಲ್ ಆಖೈರಿನಲ್ಲೇ ಲ್ಯಾಪ್ಸು ಆಗಿ ಹೋಯಿತಾದ್ದರಿಂದ ಗೋರಿಬಿದನೂರು ಮುಸಾಫರ್‌ಬಂಗ್ಲೆ ಕಾಂಪೌಂಡುನಲ್ಲಿರತಕ್ಕ ಭಾವಿಗೆ ಬೇಕಾಗಿರುವ ಮೊಬಲಗು ಗೋರಿಬಿದನೂರು ಸಕ್ಕೆ ಕಾರ್ಖಾನೆಗೆ ಹೋಗುವ ರಸ್ತೆ ರಿಪೇರಿಗೆ ಚಾಲ್ತಿ ಸಾಲ ಬಜೆಟ್ಟಿನಲ್ಲಿ ಮಂಜೂರಾಗಿರುವ 200 ರೂಪಾಯಿಗಳ ಪೈಕಿ ಮಂಜೂರ್ಮಾಡಿರುವದಾಗಿ ತೀರ್ಮಾನವಾಯಿತು.

11. ಬಾಗೇಪಲ್ಲಿ ತಾಲ್ಲೂಕು ದೇವರಗುಡಿಪಲ್ಲಿ ಬಳಿ ಭಾವಿ 3—2—04ರಲ್ಲಿ 300 ರೂಪಾಯಿಗೆ ಮಂಜೂರಾಗಿ ಕಂಟ್ರಾಕ್ಟರ್ ನರಸಿಂಗರಾಯಪ್ಪನಿಂದ 135 ರೂಪಾಯಿಗೆ ಕಾಂಗೂರಿ ನಡದು ಅದರೊಳಗೆ ಕಟ್ಟು ಬಂಡೆ ಬಿದ್ದಿದ್ದರಿಂದ 1904—05ನೆ ಸಾಲಿನಲ್ಲಿ ಕ್ಯಾನ್ಸಲ್ ಆಗಿರುತ್ತೆ. ಈ ಅಂದಾಜು ಕ್ಯಾನ್ಸಲ್ ಆಗುವದಕ್ಕೆ ಮುಂಚೆ ಕಂಟ್ರಾಕ್ಟರ್ ವಿಶ್ವೇಶ್ವರಯ್ಯಸಾಬಿ ಎಂಬುವನಿಗೆ ತಿರಿಗಿ ಕಂಟ್ರಾಕ್ಟ್ ಕೊಟ್ಟು ಕೆಲಸ ಮಾಡಿಸಿದ್ದರ ಬಾಬತು 65 ರೂಪಾಯಿ ಅವರಿಗೆ ಪಾವತಿ ಆಗಬೇಕೆಂದು ಕೊಡಿಸಿಕೊಡತಕ್ಕದ್ದು ಮುನಾಸಬ್ ಇರುತ್ತೆಂತ ಬಾಗೇಪಲ್ಲಿ ಅಮಲ್ದಾರ್ರ 94ನೆ ನಂಬರ್ ರಿಪೋರ್ಟು ಓದಲಾಯಿತು.

ಕಂಟ್ರಾಕ್ಟ್ದಾರನು ಮಾಡಿಸರತಕ್ಕ ಕಾಂಗೂರಿಗೆ ಮೊಬಲಗು ಕೊಡತಕ್ಕದ್ದು ಸಹಜವೆಂದೂ ಇದನ್ನು ಚಾಲ್ತಿ ಸಾಲ್ ಬಜೆಟ್ಟಿನಲ್ಲಿ ಶ್ರೀನಿವಾಸಪುರ ಮುಸಾಫರ್‌ಖಾನೆ ಖರಾವಣಿಗೆ 201 ರೂಪಾಯಿ ಮಂಜೂರಾಗಿರುವದರ ಪೈಕಿ ಕೊಡಬೇಕೆಂದೂ ತೀರ್ಮಾನವಾಯಿತು.

12. ಕೋಲಾರ ತಾಲ್ಲೂಕು ಕಳ್ಳಿಪುರದಲ್ಲಿ ಭಾವಿ ತೆಗಿಸಲು ಮೊದಲು 306 ರೂಪಾಯಿ ಮಂಜೂರಾಗಿ ಕಾಂಗೂರಿ ನಡದಿರುತ್ತೆ. ಅದು ಪೂರೈಸಬೇಕಾದರೆ ಇನ್ನು 109 ರೂಪಾಯಿಗಳು ಆಗಬೇಕೆಂದು ಸದರಿ ಪೆಟೆಲ್ ಅಂದಾಜು ಕಳುಹಿಸಿರುವದಾಗಿ ಕೋಲಾರ ಸಬ್ ಡಿವೀರ್ಜ ಆಫಿಸರವರ 10—3—07ನೆ ಮಾರ್ಕ್ಕಿಂ 1067ನೆ ನಂಬರ್ ಯಾದಿ ಓದಲಾಯಿತು.

ಪೇಲ್ತಂಡ 109 ರೂಪಾಯಿ 14—9—06ನೆ ಮಾರ್ಕ್ಕಿಂ 3207-9—Agri. 22-05—66ನೆ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ ಭಾವಿಗಳ ರಿಪೇರಿ ಬಗ್ಗೆ ಮಂಜೂರಾಗಿರುವ 3,000 ರೂಪಾಯಿ ಪೈಕಿ ಕೊಡಬೇಕೆಂದು ತೀರ್ಮಾನವಾಯಿತು.

13. ಚಿಂತಾಮಣಿ ಬಂಗ್ಲೆ ಕಾಂಪೌಂಡುನಲ್ಲಿರುವ ಭಾವಿ ರಿಪೇರಿ ಬಗ್ಗೆ 22—12—0 ರೂಪಾಯಿಗೆ ಬಂದು ಅಂದಾಜು ಕಳುಹಿಸಿರುವದಾಗಿ ಕೋಲಾರ ಸಬ್ ಡಿವೀರ್ಜ ಆಫಿಸರವರ 3—2—07ನೆ ಮಾರ್ಕ್ಕಿಂ 753ನೆ ನಂಬರ್ ಯಾದಿ ಓದಲಾಯಿತು.

ಅಂದಾಜು ಮಂಜೂರ್ಮಾಡಿ ಈ ಮೊಬಲಗನ್ನು ಇದೇ ಭಾವಿ ಕಾಂಗೂರಿಗೆ ಎಗ್ಜಿಕ್ಯೂಟಿವ್ ಇಂಜನಿಯರವರ ಅಂದಾಜಿನಲ್ಲಿ ಸೇರಿಸಿಕೊಳ್ಳಬೇಕೆಂದೂ ತೀರ್ಮಾನವಾಯಿತು.

14. ವಕ್ಕಲೇರಿ ಹೊಲೇರ ಭಾವಿಗೆ ವಾಡೆಕಟ್ಟಿಸಿಕೊಡಲು 50 ರೂಪಾಯಿಗೆ ಅಂದಾಜು ಕಳುಹಿಸಿರುವದಾಗಿ ಕೋಲಾರ ಸಬ್ ಡಿವೀರ್ಜ ಆಫಿಸರವರ 10—3—07ನೆ ಮಾರ್ಕ್ಕಿಂ 1069ನೆ ನಂಬರ್ ಯಾದಿ ಓದಲಾಯಿತು.

ಅಂದಾಜು ಮಂಜೂರ್ಮಾಡಿ ಮೊಬಲಗು 14—9—06ನೆ ಮಾರ್ಕ್ಕಿಂ 3207-9—Agri. 22-05—66ನೆ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ ಮಂಜೂರಾಗಿರುವ 3,000 ರೂಪಾಯಿ ಪೈಕಿ ಕೊಡಬೇಕೆಂದು ತೀರ್ಮಾನವಾಯಿತು.

15. ಚಾಲ್ತಿ ಸಾಲ್ ಬಜೆಟ್ಟಿನಲ್ಲಿ ಸರ್ವಿಜ಼್ ಇರುವ 500 ರೂಪಾಯಿಗಳಿಗೆ ಒಳಪಟ್ಟು ಈ ಕೆಳಗೆ ನಮೂದಿಸಿರುವ ಅಂದಾಜುಗಳು ಬೋರ್ಡಿನವರು ಮಂಜೂರ್ಮಾಡಿರುತ್ತಾರೆ:—

				ರೂ.
1.	ಕೋಲಾರ	...	ಪಟ್ಣ ಮುಸಾಫರಖಾನೆ ರಿಪೇರಿ	100
2.	ಬವರಿಂಗ್‌ಪೇಟೆ	...	ಕಾಮಸಂದ್ರ ಮುಸಾಫರಖಾನೆ ರಿಪೇರಿ	198
3.	ಚಿಂತಾಮಣಿ	...	ಮುಂಗಿನಪಲ್ಲಿ ಮುರುಗಮಲ ರಸ್ತೆ ರಿಪೇರಿ	400
4.	ಮುಳಬಾಗಿಲ್	...	ಮುಳಬಾಗಿಲ್ ಮುಸಾಫರ್‌ಖಾನೆ ರಿಪೇರಿ	300
5.	ಶ್ರೀನಿವಾಸಪುರ	...	ಲಕ್ಷ್ಮಿಸಾಗರದಿಂದ ಎಲ್ಲೂರಿಗೆ ರಸ್ತೆ ರಿಪೇರಿ	100
6.	ಡಿಟೋ	...	ದಳಸನೂರು ದೊಡ್ಡಿ ರಿಪೇರಿ	60
7.	ಡಿಟೋ	...	ಮಣಿಗೆಪಲ್ಲಿ ಭಾವಿ ಕಾಂಗೂರಿ	230
8.	ಡಿಟೋ	...	ಭೀರಂಗಿಗಾರ್ಪಲ್ಲಿ ರಸ್ತೆ ಕಾಂಗೂರಿ	371
9.	ಡಿಟೋ	...	ಶ್ರೀನಿವಾಸಪುರ ಮುಸಾಫರ್‌ಖಾನೇಲಿ ಕಳ್ಳು ಕಾಂಗೂರಿ	120

				ರೂ.
10.	ಶಿಡ್ಲಘಟ್ಟ	...	ದಿಬ್ಬೂರಹಳ್ಳಿ ರಸ್ತೆ ಬಡಾವಣೆ	499
11.	ಡಿಟೋ	...	ಡಿಟೋ ರಸ್ತೆ ರಿಪೇರಿ	200
12.	ಡಿಟೋ	...	ಕುಂದಲಗುರ್ಕಿ ಕುಂಟೆ ಆಳಪಡಿಸುವದು	130
13.	ಬಾಗೇಪಲ್ಲಿ	...	ದೊರಣಪಲ್ಲಿ ಭಾವಿ ಕಾಂಗಾರಿ	250
14.	ಡಿಟೋ	...	ಬಿಳ್ಳೂರು ದೊಡ್ಡಿ ಡಿಟೋ	100
15.	ಗೋರಿಬಿದನೂರು	...	ಕುರುಡಿ ಭಾವಿ ಇಳಿಸುವದು	350
16.	ಡಿಟೋ	...	ಹುದುಗೂರು ದೊಡ್ಡಿ ಕಾಂಗಾರಿ	100
17.	ಡಿಟೋ	...	ಹೊಸೂರು ರಸ್ತೆ ರಿಪೇರಿ	150
18.	ಡಿಟೋ	...	ಸಾಬದ ಹೊಸಪಳ್ಳಿ ದೊಡ್ಡಿ ಕಾಂಗಾರಿ	100
19.	ಡಿಟೋ	...	ಕುಡುಮುಲ್‌ಕುಂಟೆ ಭಾವಿ ಡಿಟೋ	300
20.	ಡಿಟೋ	...	ವಿದುರಾಶ್ವತ್ಥ-ರಸ್ತೆ ರಿಪೇರಿ	150
21.	ಗುಡಿಬಂಡೆ	...	ಪಸರಲೋಡು ಭಾವಿ ರಿಪೇರಿ	50
22.	ಡಿಟೋ	...	ನೋಪೇಶ್ವರ-ಮಿಟ್ಟೆಮರಿ ರಸ್ತೆ ರಿಪೇರಿ	50
23.	ಡಿಟೋ	...	ನುಲಿಗೊಂಬ ಭಾವಿ ಕಾಂಗಾರಿ	50
24.	ಡಿಟೋ	...	ಗುಡಿಬಂಡೆ ಮುಸಾಫರ್‌ಖಾನೆ ಬಳಿ ಭಾವಿ ರಿಪೇರಿ	100
25.	ಡಿಟೋ	...	ಇಂಗಿರಡಿ ಹಳ್ಳಿ ಭಾವಿ ಕಾಂಗಾರಿ	100
			ಜುಮ್ಲಾ ..	4,558

16. ಕಾಮಸಂದ್ರದ ಮುಸಾಫರ್‌ಖಾನೇಲಿ ಇಲಿ ಸತ್ತು ಬಿದ್ದದ್ದರಿಂದ ಅದರ ಭಾವಣಿ ಕಿತ್ತುಹಾಕಿರುತ್ತೆ. ಇದರ ರಿಪೇರಿಗಾಗಿ 198 ರೂಪಾಯಿಗಳು ಬೇಕಾಗಿರುತ್ತೆ. ಮತ್ತು ಈ ಕಾಮಸಂದ್ರ ಗ್ರಾಮದಲ್ಲಿ ಚೆಪ್ಪಲುಕೇಂಡು ನಾಶಪಡಿಸತಕ್ಕದ್ದಕ್ಕಾಗಿ ಕೆಲವು ಹಣ ಬೇಕಾಗಿರುತ್ತೆಂದು ಬವರಿಂಗುಪೇಟೆ ಮೊಂಬರು ವೆ|| ಬಸವೇಗೌಡರಿಂದ ಪ್ರೊಪೋಜು ಮಾಡಲ್ಪಟ್ಟಿತು.

ಕಾಮಸಂದ್ರ ಮುಸಾಫರ್‌ಖಾನೆ ರಿಪೇರಿ ಬಗ್ಗೆ 198 ರೂಪಾಯಿ ಚಾಲ್ತಿಸಾಲ್ ಬಜೆಟ್ಟಿನಲ್ಲಿ ಕಾಮಸಂದ್ರ ಗ್ರಾಮದಿಂದ ರೈಲ್ವೆ ಸ್ಟೇಷನಿಗೆ ಹೋಗುವ ರಸ್ತೆಯಲ್ಲಿ ಬಂದು ಪೊಹರಿ ಕಟ್ಟಲು ಪ್ರೊವೈಡು ಆಗಿರುವ 250 ರೂಪಾಯಿ ಪೈಕಿ ಕೊಡಬೇಕೆಂದೂನ್ನೂ ಚೆಪ್ಪಲಿ ಕೇಂಡು ನಾಶಪಡಿಸಲು ಇದಕ್ಕಾಗಿ ಮಂಜೂರಾಗಿರುವ 800 ರೂಪಾಯಿ ಪೈಕಿ 100 ರೂಪಾಯಿ ಮಂಜೂರ್ಮಾಡಿರುತ್ತೆಂದೂನ್ನೂ ತೀರ್ಮಾನವಾಯಿತು.

17. ಪ್ರತಿ ತಾಲ್ಲೂಕುಗಳಿಗೂ ಮತ್ತು ಡಿಸ್ಟ್ರಿಕ್ಟ್‌ಗಳಿಗೂ ಮಾಹೆಯಾನ 15 ರೂಪಾಯಿ ತಲಬ್ದುಳ್ಳ ಒಬ್ಬ ರೈಟರನ್ನು ಲೋಕಲ್ ಫಂಡು ಕೆಲಸಕ್ಕಾಗಿ ಜಾಸ್ತಿಯಾಗಿ ಮಂಜೂರ್ಮಾಡಿರುತ್ತೆಂದು ಗೌರ್ನಮೆಂಟಿನಿಂದ ತಲಪಿದ 16—3—07ನೆ ಮತ್ತು 8333-44—L. B. 422-05—12ನೆ ನಂಬರ್ ಪ್ರೊಸೀಡಿಂಗ್ಸು ಓದಲಾಯಿತು.

ಈ ಜಾಸ್ತಿ ಸಿಬ್ಬಂದಿ ಖರ್ಚಿಗಾಗಿ 2,160 ರೂಪಾಯಿಗೆ ರಿವೈಜ್ ಬಜೆಟ್ಟು ಕಳುಹಿಸಬೇಕೆಂದು ತೀರ್ಮಾನವಾಯಿತು.

18. ಈ ಕೆಳಗೆ ನಮೂದಾಗುವ ತಾಲ್ಲೂಕು ಬೋರ್ಡುಗಳ ವಿಾಟಿಂಗು ಪ್ರೊಸೀಡಿಂಗ್ಸುಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು:—

1.	ಕೋಲಾರ	5— 1—07
2.	ಬವರಿಂಗಪೇಟೆ	28— 1—07
3.	ಶ್ರೀನಿವಾಸಪುರ	24—12—06
4.	ಮುಳಬಾಗಲ್	16— 1—07
5.	ಮಾಲೂರು	24— 1—07
6.	ಚಿಕ್ಕಬಳ್ಳಾಪುರ	20— 2—07
7.	ಗುಡಿಬಂಡೆ	29—12—06
8.	ಬಾಗೇಪಲ್ಲಿ	24— 1—07
9.	ಶಿಡ್ಲಘಟ್ಟ	25—12—06

19. ಬರುವ ವಿಾಟಿಂಗು 1907ನೆ ಇಸವಿ ಜೂನ್ ಸಾಹೆ 8ನೆ ತಾರೀಖು ಶನಿವಾರ ಆಗಬೇಕ್ಕೆಂದು ತೀರ್ಮಾನವಾಯಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್.